**ಕವಿತೆ**




# ಸಾಕೋ ಬೇಕೋ?

**ಮಳೆ** ಚಳಿ ಗಾಳಿ ಬೆಳಕು
ಮಣ್ಣು ಮರ ಹಣ್ಣು ಹೂವು
ಸನಿಕೆ ಗುದ್ದಲಿ ಬುಟ್ಟಿ ಹಟ್ಟಿ
ಸಾಕೋ ಬೇಕೋ?

ಜಲ್ಲಿ ಕಲ್ಲು ಶಿಲೆ ಮಲೆ
ಮರಳು ಇಟ್ಟಿಗೆ
ಟಾರು ಸಿಮೆಂಟು
ಜೆಸಿಬಿ ಹಿಟಾಚಿ
ಡೀಸೆಲು ಪೆಟ್ರೋಲು
ಸಾಕೋ ಬೇಕೋ?

ಬಿಲ್ಡಿಂಗು ಡ್ಯಾಮು ಕರೆಂಟು ರೈಲು
ಹೈವೇ, ಫ್ಲೈ ಓವರು,
ಮೆಟ್ರೊ, ಎಲಿವೇಟರು
ಹೋಟಲ್ಲು, ಮಾಲು,
ಹಾಸ್ಪಿಟಲ್ಲು ರೆಸಾರ್ಟು
ಟೂರು ಕಾರು ಬಾರು ಶೇರು ದರಬಾರು
ಸಾಕೋ ಬೇಕೋ?

ಇಗೋ... ತಗೋ...
ಚಂಡಮಾರುತ, ಬೆಂಕಿಹೊಳೆ
ಹಿಮಪಾತ, ದೂಳುಮಳೆ,
ಭೂ ಕುಸಿತ, ಕಾಳ್ಗಿಚ್ಚು, ಮಂಜುಮಳೆ
ಬಿಸಿಗಾಳಿ, ಪ್ರವಾಹ, ಪ್ರಳಯ, ಲಯ,
ತಗೋ... ತಗೋ... ತಗೋ...

**● ಸವಿತಾ ನಾಗಭೂಷಣ**